## ಜಾಹೀರಾತು ಸಂಖ್ಯೆ: 01/2019 ರಲ್ಲಿನ
## ಃ ಚಾಲಕ & ಚಾಲಕ-ಕಂ-ನಿರ್ವಾಹಕ (ಪಜಾ-ಹಿಂಬಾಕಿ) ಹುದ್ದೆಗೆ ಆನ್‌ಲೈನ್ ಮೂಲಕ ಅರ್ಜಿಯನ್ನು ಭರ್ತಿ ಮಾಡುವ ವಿಧಾನ ಃ

1. ನೊಂದಣಿ ಸಂಖ್ಯೆ ಃ [ಸ್ವಯಂಚಾಲಿತವಾಗಿರುತ್ತದೆ]
2. ಹುದ್ದೆಯ ಹೆಸರು ಃ
   ಅ) ಚಾಲಕ (ಪಜಾ ಅಭ್ಯರ್ಥಿಯು ಚಾಲಕ, ಚಾಲಕ-ಕಂ-ನಿರ್ವಾಹಕ ಹುದ್ದೆಗೆ ಅರ್ಜಿ ಸಲ್ಲಿಸುವ ಬಗ್ಗೆ ನಮೂದಿಸಬೇಕು. ಎರಡೂ ಹುದ್ದೆಗಳಿಗೆ ಅರ್ಜಿ ಸಲ್ಲಿಸಿದಲ್ಲಿ ಎರಡೂ ಹುದ್ದೆಗಳ ಮುಂದಿನ ವೃತ್ತದಲ್ಲಿ ಕ್ಲಿಕ್ಕಿಸುವುದು.
   ಆ) ಹುದ್ದೆಯ ಆದ್ಯತೆ ಃ ಚಾಲಕ, ಚಾಲಕ-ಕಂ-ನಿರ್ವಾಹಕ (ಪಜಾ ಅಭ್ಯರ್ಥಿಗಳಿಗೆ ಮಾತ್ರ)
   ಅಭ್ಯರ್ಥಿಗಳು ಚಾಲಕ ಮತ್ತು ಚಾಲಕ-ಕಂ-ನಿರ್ವಾಹಕ ಎರಡೂ ಹುದ್ದೆಗಳಿಗೂ ಅರ್ಜಿಯನ್ನು ಸಲ್ಲಿಸಬಯಸಿದಲ್ಲಿ ಒಂದೇ ಅರ್ಜಿ ನಮೂನೆಯಲ್ಲಿ ಅರ್ಜಿ ಸಲ್ಲಿಸಬೇಕಾಗಿರುತ್ತದೆ. ಅಭ್ಯರ್ಥಿಯು ಅರ್ಜಿ ನಮೂನೆಯಲ್ಲಿ ಎರಡೂ ಹುದ್ದೆಗಳ ಮುಂದೆ ತೋರಿಸಲಾದ ವೃತ್ತದಲ್ಲಿ "ಹೌದು" ಅಥವಾ "ಇಲ್ಲ" ಎಂದು ನಮೂದಿಸುವುದು ಕಡ್ಡಾಯವಾಗಿರುತ್ತದೆ. ಅಭ್ಯರ್ಥಿಯು ಎರಡೂ ಹುದ್ದೆಗಳಿಗೂ ಅರ್ಜಿ ಸಲ್ಲಿಸಿದಾಗ ಯಾವ ಹುದ್ದೆಗೆ ಮೊದಲ ಆದ್ಯತೆ ಇದೆ ಎಂಬುದನ್ನು ಹುದ್ದೆಯ ಕಾಲಂನಲ್ಲಿ ಬರುವ ಹುದ್ದೆಯ ಮೇಲೆ ಆಯ್ಕೆ ಮಾಡಬೇಕಾಗುತ್ತದೆ. ಈ ರೀತಿ ತಿಳಿಸಲಾದ ಹುದ್ದೆಯ ಆದ್ಯತೆಯನ್ನು ನಂತರ ಯಾವುದೇ ಕಾರಣಕ್ಕೂ ಬದಲಾಯಿಸಲು ಅವಕಾಶವಿರುವುದಿಲ್ಲ. ಎರಡೂ ಹುದ್ದೆಗಳಿಗೆ ಅರ್ಜಿ ಸಲ್ಲಿಸಿದಾಗ, ಎರಡೂ ಹುದ್ದೆಗಳ ಅರ್ಜಿಯ ಶುಲ್ಕದ ಮೊತ್ತವು ಒಂದೇ ಚಲನನಲ್ಲಿ ಮುದ್ರಿತಗೊಂಡು ಬರುತ್ತದೆ.
3. ಅಭ್ಯರ್ಥಿಯ ಹೆಸರು ಃ ಎಸ್.ಎಸ್.ಎಲ್.ಸಿ ಅಂಕಪಟ್ಟಿಯಲ್ಲಿರುವಂತೆ ನಿಮ್ಮ ಹೆಸರನ್ನು ಭರ್ತಿ ಮಾಡಬೇಕು. [ನಿಮ್ಮ ಇನಿಷಿಯಲ್ ಕೊನೆಗೆ ಅಂದರೆ ಹೆಸರಿನ ನಂತರ ಬರುವಂತೆ ತುಂಬಿರಿ.] ಉದಾ: 1. ರಾಮಪ್ಪ ಎನ್ ಪಾಟೀಲ 2. ರಾಜೇಶ ಎಸ್ ಕೆ 3. ಕೃಷ್ಣ 4. ಚಂದ್ರಕಾಂತ ತಂ.ರಾಮಪ್ಪ
4. ತಂದೆಯ ಹೆಸರು ಃ ಎಸ್.ಎಸ್.ಎಲ್.ಸಿ ಅಂಕಪಟ್ಟಿಯಲ್ಲಿರುವಂತೆ ನಿಮ್ಮ ತಂದೆಯ ಹೆಸರನ್ನು ಭರ್ತಿ ಮಾಡಬೇಕು
5. ಆಧಾರ ಸಂಖ್ಯೆ ಃ ನಿಮ್ಮ ಆಧಾರ ಸಂಖ್ಯೆಯನ್ನು ನಮೂದಿಸಬೇಕು.
6. ಮೊಬೈಲ್ ಸಂಖ್ಯೆ ಃ ನಿಮ್ಮ ಮೊಬೈಲ್ ಸಂಖ್ಯೆಯನ್ನು ನಮೂದಿಸಬೇಕು.
7. ಲಿಂಗ : ನೀವು ಮಹಿಳೆಯೋ ಅಥವಾ ಪುರುಷ ಎನ್ನುವ ಬಗ್ಗೆ ನಮೂದಿಸಬೇಕು.
8. ಹುಟ್ಟಿದ ದಿನಾಂಕ : ಎಸ್.ಎಸ್.ಎಲ್.ಸಿ. ಅಥವಾ ತತ್ಸಮಾನ ಪರೀಕ್ಷೆಯ ಪ್ರಮಾಣ ಪತ್ರ / ವರ್ಗಾವಣೆಯ ಪ್ರಮಾಣ ಪತ್ರ / ಜನ್ಮ ದಿನಾಂಕವನ್ನು ತೋರಿಸುವ ಸಂಚಿತ ದಾಖಲೆಯ ಉದ್ಧೃತ ಭಾಗದಲ್ಲಿ ನಮೂದಿಸಿರುವ ನಿಮ್ಮ ಜನ್ಮ ದಿನಾಂಕವನ್ನು ಭರ್ತಿ ಮಾಡಬೇಕು.
9. ವಿಳಾಸ : ನಿಮ್ಮ ಸಂಪೂರ್ಣ ಅಂಚೆ ವಿಳಾಸ (ಪಿನ್‌ಕೋಡ್ ಸಂಖ್ಯೆಯನ್ನು ಕಡ್ಡಾಯವಾಗಿ ನಮೂದಿಸಲು ಸೂಚಿಸಲಾಗಿದೆ)

10 & 11. ತಾಲ್ಲೂಕು & ಜಿಲ್ಲೆ: ತಮ್ಮ ಸ್ವಂತ ತಾಲ್ಲೂಕು ಮತ್ತು ಜಿಲ್ಲೆಯನ್ನು ನಮೂದಿಸುವುದು.

12. ಶೈಕ್ಷಣಿಕ ವಿದ್ಯಾರ್ಹತೆ : ಎಸ್.ಎಸ್.ಎಲ್.ಸಿ ಅಥವಾ ತತ್ಸಮಾನ ವಿದ್ಯಾರ್ಹತೆಯಲ್ಲಿ ಉತ್ತೀರ್ಣರಾದ ಬಗ್ಗೆ : ನೀವು ಯಾವ ವಿದ್ಯಾರ್ಹತೆ ಹೊಂದಿರುತ್ತೀರಿ / ತೇರ್ಗಡೆ ಹೊಂದಿದ ವಿದ್ಯಾರ್ಹತೆಯ ನೊಂದಣಿ ಸಂಖ್ಯೆ ಮತ್ತು ಯಾವ ವರ್ಷದಲ್ಲಿ ಉತ್ತೀರ್ಣರಾಗಿದ್ದೀರಿ ಎನ್ನುವುದನ್ನು ನಮೂದಿಸಬೇಕು.

13. ಧರ್ಮ ಃ ಹಿಂದೂ-ಮುಸ್ಲಿಂ-ಕ್ರಿಶ್ಚಿಯನ್-ಜೈನ್ ಧರ್ಮಕ್ಕೆ ಸೇರಿದ ಬಗ್ಗೆ ನಮೂದಿಸುವುದು ಮತ್ತು ಅಭ್ಯರ್ಥಿಯು ತಾವು ಸೇರಿದ ಜಾತಿಯ ಹೆಸರನ್ನು ನಮೂದಿಸುವುದು.

ಮೀಸಲಾತಿ ಪ್ರವರ್ಗ ಃ

| | |
|---|---|
| ಪರಿಶಿಷ್ಟ ಜಾತಿ / ಪರಿಶಿಷ್ಟ ಪಂಗಡ /ಪ್ರವರ್ಗ-1 / 2ಎ / 2ಬಿ / 3ಎ / 3ಬಿ /ಸಾಮಾನ್ಯ ವರ್ಗ | ನೀವು ಯಾವ ವರ್ಗಕ್ಕೆ ಸೇರಿರುತ್ತೀರಿ ಎಂಬ ಬಗ್ಗೆ ಸಂಬಂಧಪಟ್ಟ ವರ್ಗವನ್ನು ಗುರುತಿಸಬೇಕು. |

14. ಸಮತಳ ಮೀಸಲಾತಿ ಃ

| | |
|---|---|
| ಮಾಜಿ ಸೈನಿಕ / ಗ್ರಾಮೀಣ ಅಭ್ಯರ್ಥಿಯೇ / ಕನ್ನಡ ಮಾಧ್ಯಮ / ಯೋಜನಾ ನಿರಾಶ್ರಿತರೇ | ನೀವು ಯಾವ ಮೀಸಲಾತಿಗಳನ್ನು ಕೋರುತ್ತೀರಿ ಎಂಬ ಬಗ್ಗೆ ನಿಗದಿತ ವೃತ್ತದಲ್ಲಿ ಗುರುತಿಸಬೇಕು. |

15. ಅಶಕ್ತ ಮಾಜಿ ಸೈನಿಕರ ಅವಲಂಬಿತರಿಗೆ ಅರ್ಜಿ ಶುಲ್ಕದಲ್ಲಿ ರಿಯಾಯತಿಯನ್ನು ಮಾತ್ರ ನೀಡಲಾಗುವುದು. ಈ ರಿಯಾಯತಿ ಪಡೆಯುವ ಅಭ್ಯರ್ಥಿಗಳು ನಿಗದಿತ ವೃತ್ತದಲ್ಲಿ "ಹೌದು" ಎಂದು ಇಲ್ಲವಾದಲ್ಲಿ "ಇಲ್ಲ" ಎಂದು ಗುರುತಿಸುವುದು.

16. ಇಲಾಖಾ ಅಭ್ಯರ್ಥಿಗಳಾಗಿದ್ದಲ್ಲಿ ಃ ನೇಮಕಾತಿ ದಿನಾಂಕ / ಪರೀಕ್ಷಾರ್ಥ ದಿನಾಂಕ / ಖಾಯಂಗೊಂಡ ದಿನಾಂಕ ಮತ್ತು ವಿಭಾಗ/ಸಂಸ್ಥೆ ವಿವರವನ್ನು ನಿಗದಿತ ಬಾಕ್ಸಗಳಲ್ಲಿ ನಮೂದಿಸತಕ್ಕದ್ದು.

17. ದೇಹದಾರ್ಢ್ಯತೆ ಃ ನಿಮ್ಮ ನಿಗದಿತ ಎತ್ತರ ಸೆಂ.ಮೀ.ಗಳಲ್ಲಿ ಮತ್ತು ತೂಕವನ್ನು ಕೆ.ಜಿ ಗಳಲ್ಲಿ ನಿಗದಿತ ಬಾಕ್ಸ್‌ನಲ್ಲಿ ನಮೂದಿಸತಕ್ಕದ್ದು.

18. ಪರವಾನಿಗೆ ವಿವರಗಳು ಃ ಚಾಲಕ-ಕಂ-ನಿರ್ವಾಹಕ ಹುದ್ದೆಗೆ ಅರ್ಜಿ ಸಲ್ಲಿಸುವ ಅಭ್ಯರ್ಥಿಗಳು ಚಾಲ್ತಿಯಲ್ಲಿರುವ ಭಾರಿ ವಾಹನ ಚಾಲನಾ ಪರವಾನಿಗೆ ಮತ್ತು ನಿರ್ವಾಹಕ ಪರವಾನಿಗೆ ಹೊಂದಿದ್ದಲ್ಲಿ ಪರವಾನಿಗೆ ವಿವರಗಳನ್ನು ನಮೂದಿಸುವುದು. ಚಾಲಕ ಹುದ್ದೆಗೆ ಅರ್ಜಿ ಸಲ್ಲಿಸುವ ಅಭ್ಯರ್ಥಿಗಳು ಚಾಲ್ತಿಯಲ್ಲಿರುವ ಭಾರಿ ವಾಹನ ಚಾಲನಾ ಪರವಾನಿಗೆ ವಿವರಗಳನ್ನು ನಮೂದಿಸುವುದು. ಅರ್ಜಿ ಸಲ್ಲಿಸಲು ನಿಗದಿಪಡಿಸಿರುವ ಕೊನೆಯ ದಿನಾಂಕದಂದು ಚಾಲ್ತಿಯಲ್ಲಿರುವ ಭಾರಿ ಸರಕು ಸಾಗಾಣಿಕೆ ವಾಹನ (HTV) ಚಾಲನಾ ಪರವಾನಿಗೆ ಹೊಂದಿ ಕನಿಷ್ಠ 2

Printed by BoltPDF (c) NCH Software. Free for non-commercial use only.

ವರ್ಷಗಳಾಗಿರಬೇಕು ಮತ್ತು ಪ್ರಯಾಣಿಕರ ಭಾರಿ ವಾಹನ ಚಾಲನಾ ಪರವಾನಿಗೆ ಹಾಗೂ ಕರ್ನಾಟಕ PSV ಬ್ಯಾಡ್ಜ್ ಹೊಂದಿರಬೇಕು.

19. ಅಭ್ಯರ್ಥಿಯು ಎಸ್.ಎಸ್.ಎಲ್.ಸಿ / ತತ್ಸಮಾನ ವಿದ್ಯಾರ್ಹತೆಯಲ್ಲಿ ಕನ್ನಡವನ್ನು ಪ್ರಥಮ ಅಥವಾ ದ್ವಿತೀಯ ಭಾಷೆಯನ್ನಾಗಿ ತೆಗೆದುಕೊಂಡು ಉತ್ತೀರ್ಣರಾಗಿದ್ದಲ್ಲಿ ನಿಗದಿತ ವೃತ್ತದಲ್ಲಿ "ಹೌದು" ಎಂದು ಇಲ್ಲವಾದಲ್ಲಿ "ಇಲ್ಲ" ಎಂದು ಗುರುತಿಸುವುದು.

20. ನೀವು ಈ ಹಿಂದೆ ಸರ್ಕಾರದ ಅಥವಾ ಸರ್ಕಾರಿ ಸ್ವಾಮ್ಯದ ಸಂಸ್ಥೆಯಿಂದ ವಜಾ ಮಾಡಲ್ಪಟ್ಟಿದ್ದರೆ / ತೆಗೆದುಹಾಕಲ್ಪಟ್ಟಿದ್ದಲ್ಲಿ ಸಂಬಂಧಪಟ್ಟ ವೃತ್ತದಲ್ಲಿ 'ಹೌದು' ಎಂದು ಇಲ್ಲವಾದಲ್ಲಿ 'ಇಲ್ಲ' ಎಂದು ಗುರುತಿಸುವುದು.

## **: ಅರ್ಜಿ ಶುಲ್ಕ ಪಾವತಿ ಕುರಿತು ಸೂಚನೆ :**

ಅಭ್ಯರ್ಥಿಗಳು ಅರ್ಜಿಶುಲ್ಕವನ್ನು ಪಾವತಿ ಮಾಡುವ ಕುರಿತು ಈ ಕೆಳಗಿನ ನಿರ್ದೇಶನಗಳನ್ನು ತಪ್ಪದೇ ಪಾಲಿಸತಕ್ಕದ್ದು.

| ವರ್ಗ/ಗುಂಪಿಗೆ ಸಂಬಂಧಪಟ್ಟ ಅಭ್ಯರ್ಥಿಗಳು | ಅರ್ಜಿ ಶುಲ್ಕ (ಒಂದು ಹುದ್ದೆಗೆ) |
|---|---|
| ಅ) ಪ.ಜಾ./ಪ.ಪಂ/ವರ್ಗ–1/ಮಾ.ಸೈ. ಮತ್ತು ಅಶಕ್ತ ಮಾಜಿ ಸೈನಿಕರ ಅವಲಂಬಿತರಿಗೆ | ರೂ. 300-00 |
| ಆ) ವರ್ಗ:2ಎ/2ಬಿ/3ಎ/3ಬಿ/ಸಾಮಾನ್ಯ | ರೂ. 600-00 |

**(ವಿಶೇಷ ಸೂಚನೆ : ಚಾಲಕ ಮತ್ತು ಚಾಲಕ–ಕಂ–ನಿರ್ವಾಹಕ (ಪಜಾ ಅಭ್ಯರ್ಥಿಗಳು ಮಾತ್ರ) ಎರಡೂ ಹುದ್ದೆಗಳಿಗೆ ಅರ್ಜಿ ಸಲ್ಲಿಸಬಯಸುವ ಅಭ್ಯರ್ಥಿಗಳು ಎರಡೂ ಹುದ್ದೆಗಳಿಗೆ ನಿಗದಿಪಡಿಸಿದ ಅರ್ಜಿ ಶುಲ್ಕ ಪಾವತಿಸಬೇಕಾಗುತ್ತದೆ.)**

ಅಭ್ಯರ್ಥಿಗಳು www.nwkrtc.in ನಲ್ಲಿ ON LINE ಮೂಲಕ ಅರ್ಜಿ ಸಲ್ಲಿಸಿದ ನಂತರ ಚಲನ್ ಪ್ರತಿಯನ್ನು ಡೌನ್‌ಲೋಡ್ ಮಾಡಿಕೊಂಡು ನಿಗದಿತ ಅರ್ಜಿ ಶುಲ್ಕವನ್ನು ಪ್ರಧಾನ ಅಂಚೆ ಕಚೇರಿಯ ಕೆಲಸದ ವೇಳೆಯೊಳಗೆ ಯಾವುದೇ ಎಲೆಕ್ಟ್ರಾನಿಕ್ ಅಂಚೆ ಕಚೇರಿಯಲ್ಲಿ (Computerised Post Offices only) ಮಾತ್ರ ಇ–ಪೇಮೆಂಟ್ ಮೂಲಕ ಸಂದಾಯ ಮಾಡಬಹುದಾಗಿರುತ್ತದೆ. ಶುಲ್ಕವನ್ನು ಪಾವತಿಸದೇ ಇರುವ ಅಭ್ಯರ್ಥಿಗಳ ಅರ್ಜಿಗಳನ್ನು ತಿರಸ್ಕರಿಸಲಾಗುವುದು. ಅಂಚೆ ಕಚೇರಿಯಲ್ಲಿ ಪಾವತಿಸಿದ ಮೂಲ ಚಲನ್ ಪ್ರತಿಯನ್ನು ಮೂಲ ದಾಖಲಾತಿ / ದೈಹಿಕ ಅರ್ಹತೆ ಪರಿಶೀಲನೆ ಹಾಗೂ ಚಾಲನಾ ವೃತ್ತಿ ಪರೀಕ್ಷೆ ಸಮಯದಲ್ಲಿ ಕಡ್ಡಾಯವಾಗಿ ಹಾಜರುಪಡಿಸತಕ್ಕದ್ದು.

ಅ) ಒಮ್ಮೆ ಶುಲ್ಕವನ್ನು ಪಾವತಿಸಿದ ನಂತರ ಅದನ್ನು ಯಾವುದೇ ಸಂದರ್ಭದಲ್ಲಿಯೂ ಹಿಂತಿರುಗಿಸಲಾಗುವುದಿಲ್ಲ ಅಥವಾ ಅದನ್ನು ಸಂಸ್ಥೆಯು ನಡೆಸುವ ಇತರೆ ನೇಮಕಾತಿಗಳಿಗೆ ಹೊಂದಿಸಿಕೊಳ್ಳಲಾಗುವುದಿಲ್ಲ.

ಆ) ಅರ್ಜಿಯನ್ನು ಯಶಸ್ವಿಯಾಗಿ ಸಲ್ಲಿಸಿದ ನಂತರ ಅರ್ಜಿ ಶುಲ್ಕ ಪಾವತಿಸಲು ನಿಗದಿಪಡಿಸಿದ ಕೊನೆಯ ದಿನಾಂಕ : **10–01–2020** ರ ಒಳಗಾಗಿ ಅರ್ಜಿ ಶುಲ್ಕವನ್ನು ತುಂಬಬೇಕಾಗುತ್ತದೆ. ಅಭ್ಯರ್ಥಿಗಳು ಅರ್ಜಿ ಶುಲ್ಕವನ್ನು ತುಂಬದೇ ಇದ್ದಲ್ಲಿ ಅವರ ಅರ್ಜಿಯು ತಿರಸ್ಕೃತಗೊಳ್ಳುತ್ತದೆ. ಸಂಸ್ಥೆಯು ನಿಗದಿಪಡಿಸಿದ ಮುದ್ರಿತ ಚಲನ್ ಹೊರತುಪಡಿಸಿ ಇನ್ನುಳಿದ ಯಾವುದೇ ರೀತಿಯಲ್ಲಿ ಅಂದರೆ ಡಿ.ಡಿ / ಐ.ಪಿ.ಓ / ಚೆಕ್ ಇತ್ಯಾದಿಗಳ ಮೂಲಕ ಸಲ್ಲಿಸಿದ ಅರ್ಜಿ ಶುಲ್ಕವನ್ನು ಪರಿಗಣಿಸಲಾಗುವುದಿಲ್ಲ. ಇಂತಹ ಅರ್ಜಿಗಳನ್ನು ತಿರಸ್ಕರಿಸಲಾಗುವುದು.

**ವಿಶೇಷ ಸೂಚನೆ : ಅರ್ಜಿ ಶುಲ್ಕವನ್ನು ಪಾವತಿಸದಿರುವುದು ಅಥವಾ ಕಡಿಮೆ ಮೊತ್ತದ ಅರ್ಜಿ ಶುಲ್ಕವನ್ನು ಪಾವತಿಸಿರುವುದು ಯಾವುದೇ ಸಂದರ್ಭದಲ್ಲಿ ಕಂಡು ಬಂದರೂ ಸಹ ಅಂತಹ ಅಭ್ಯರ್ಥಿಗಳ ಅಭ್ಯರ್ಥಿತನವನ್ನು ತಿರಸ್ಕರಿಸಲಾಗುವುದು.**

**ಇತರೆ ಸೂಚನೆಗಳು :**

- ಭರ್ತಿ ಮಾಡಿದ ಅರ್ಜಿಯನ್ನು ಆನ್‌ಲೈನ್ ಮುಖಾಂತರ ಸಲ್ಲಿಸುವ ಮುನ್ನ ಸೂಚನೆಗಳನ್ನು ತಪ್ಪದೇ ಓದಿಕೊಂಡು ಒಪ್ಪಿಕೊಂಡಿರಬೇಕು.
- ಅರ್ಜಿಯನ್ನು ಸಂರಕ್ಷಿಸಿದ ನಂತರ ಕಂಪ್ಯೂಟರ್‌ನಲ್ಲಿ ನೀಡುವ ನೊಂದಣಿ ಸಂಖ್ಯೆಯನ್ನು ತಪ್ಪದೇ ಬರೆದಿಟ್ಟುಕೊಳ್ಳುವುದು.
- ಅಭ್ಯರ್ಥಿಗಳ ಮಾಹಿತಿಗಾಗಿ ಅರ್ಜಿ ಸಲ್ಲಿಸಿದ ನಂತರ ಅದರ ಒಂದು ಪ್ರತಿಯನ್ನು ತಪ್ಪದೇ ಪ್ರಿಂಟ್ ತೆಗೆದುಕೊಳ್ಳುವುದು.
- ಅಭ್ಯರ್ಥಿಗಳು ಅರ್ಜಿ ಸಲ್ಲಿಸಿದ ನಂತರ ಅರ್ಜಿಯಲ್ಲಿ ನೊಂದಣಿ ಸಂಖ್ಯೆಯು ನಮೂದಿತವಾಗಿರುವುದೇ ಎನ್ನುವುದನ್ನು ಮನವರಿಕೆ ಮಾಡಿಕೊಳ್ಳುವುದು.
- ಅಪೂರ್ಣ, ಸುಳ್ಳು ಮಾಹಿತಿ, ನಿಗದಿತ ಅರ್ಜಿ ಶುಲ್ಕಕ್ಕಿಂತ ಕಡಿಮೆ ಅರ್ಜಿ ಶುಲ್ಕ ಸಲ್ಲಿಸಿದ ಹಾಗೂ ಅರ್ಜಿ ಶುಲ್ಕ ಸಲ್ಲಿಸದ ಅರ್ಜಿಗಳನ್ನು ತಿರಸ್ಕರಿಸಲಾಗುವುದು.
- ಅಂಗವಿಕಲ ಅಭ್ಯರ್ಥಿಗಳು ಈ ಹುದ್ದೆಗಳಿಗೆ ಅರ್ಜಿ ಸಲ್ಲಿಸಲು ಅರ್ಹರಿರುವುದಿಲ್ಲ.

****

Printed by BoltPDF (c) NCH Software. Free for non-commercial use only.